# Aerospace university in State

| Pub Date: | 02 Dec 2015 | Publication: | Prajavani | Edition: | Bangalore |
|---|---|---|---|---|---|
| Journalist: | Bureau | Language: | Kannada | Page No.: | 9 |
| CCM: | 35.12 | MAV: | 140460 | Circulation | 169931 |



# ರಾಜ್ಯದಲ್ಲಿ ವೈಮಾನಿಕ ವಿ.ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ವೈಮಾನಿಕ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವಂತೆ ವೈಮಾನಿಕ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು' ಎಂದು ಸಚಿವ ಆರ್. ರೋಷನ್ ಬೇಗ್ ಹೇಳಿದರು.

ಎಂ.ಆರ್.ಓ ಅಸೋಸಿಯೇಷನ್ ಆಫ್ ಇಂಡಿಯಾ, ಎಂ.ಎಂ ಆಕ್ಟಿವ್ ಹಾಗೂ ಕ್ಯಾನ್ಯೂಸ್ ಇಂಟರ್‌ನ್ಯಾಷನಲ್ ಸಹಭಾಗಿತ್ವದಲ್ಲಿ ಆಯೋಜಿಸಿರುವ ಎರಡು ದಿನಗಳ ದೇಶದ ವೈಮಾನಿಕ ಮತ್ತು ರಕ್ಷಣಾ ಕ್ಷೇತ್ರದ ನಿರ್ವಹಣೆ, ದುರಸ್ತಿ ಹಾಗೂ ಕಾರ್ಯಚರಣೆ ಉದ್ದಿಮೆಗಳ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರನ್ನು ವೈಮಾನಿಕ ರಾಜಧಾನಿ ಮಾಡಲು ದೇಶದಲ್ಲಿ ಮೊದಲ ಬಾರಿಗೆ ಏರೋಸ್ಪೇಸ್ ನೀತಿ ಜಾರಿಗೆ ತರಲಾಗಿದೆ. ದೇವನಹಳ್ಳಿ ಬಳಿ ವಿಶೇಷ ಆರ್ಥಿಕ ವಲಯ ಸ್ಥಾಪನೆಗೆ ಸಾವಿರ ಎಕರೆ ಮೀಸಲಿಡಲಾಗಿದೆ' ಎಂದರು.

**2ನೇ ರನ್‌ವೇ ನಿರ್ಮಾಣ:** ಮೂಲ ಸೌಕರ್ಯ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಂದಿತಾ ಶರ್ಮಾ ಮಾತನಾಡಿ, 'ಕೆಂಪೇಗೌಡ ವಿಮಾನ ನಿಲ್ದಾಣವನ್ನು ವರ್ಷಕ್ಕೆ 1.8 ಕೋಟಿ ಪ್ರಯಾಣಿಕರು ಬಳಸುತ್ತಿದ್ದಾರೆ. ಪ್ರಯಾಣಿಕರ ಒತ್ತಡ ಹೆಚ್ಚಿದ ಕಾರಣ 2ನೇ ರನ್‌ವೇ ನಿರ್ಮಾಣ ಕಾರ್ಯ ಸದ್ಯದಲ್ಲಿಯೇ ಆರಂಭವಾಗಲಿದೆ. ಮತ್ತೊಂದು ಟರ್ಮಿನಲ್ ನಿರ್ಮಾಣ ಮಾಡಲಾಗುವುದು' ಎಂದರು.

ಎಚ್.ಎ.ಎಲ್‌ನ ಸಿಇಒ ಕಾವೇರಿ ರಂಗನಾಥನ್, ಮ್ಯಾಕ್ಸ್ ಎಂಆರ್‌ಓ ಸರ್ವೀಸ್ ಅಧ್ಯಕ್ಷ ಭರತ್ ಮಲ್ಕಾನಿ, ಕ್ಯಾನ್ಯೂಸ್ ಅಧ್ಯಕ್ಷ ಡಾ. ಮಿಲಿಂದ್ ಪಿಂಪ್ರಿಕರ್, ಎಂಎಂ ಆಕ್ಟಿವ್ ಕಮ್ಯೂನಿಕೇಷನ್ ವ್ಯವಸ್ಥಾಪಕ ನಿರ್ದೇಶಕ ಜಗದೀಶ್, ಎಂಆರ್‌ಓ ಅಸೋಸಿಯೇಷನ್ ಆಫ್ ಇಂಡಿಯಾದ ಪ್ರಧಾನ ಕಾರ್ಯದರ್ಶಿ ಪುಲಕ್ ಸೇನ್ ಉಪಸ್ಥಿತರಿದ್ದರು.



ಮೂಲಸೌಕರ್ಯ ಅಭಿವೃದ್ಧಿ ಸಚಿವ ಆರ್.ರೋಷನ್‌ಬೇಗ್ ಅವರು ಮಂಗಳವಾರ ವೈಮಾನಿಕ ಮತ್ತು ರಕ್ಷಣಾ ಕ್ಷೇತ್ರದ ನಿರ್ವಹಣೆ, ದುರಸ್ತಿ ಹಾಗೂ ಕಾರ್ಯಚರಣೆ ಉದ್ದಿಮೆಗಳ ಪ್ರದರ್ಶನ ಉದ್ಘಾಟಿಸಿದರು. ಇಲಾಖೆಯ ಪ್ರಧಾನ ಕಾರ್ಯದರ್ಶಿ ವಂದಿತಾ ಶರ್ಮ ಚಿತ್ರದಲ್ಲಿದ್ದಾರೆ. –ಪ್ರಜಾವಾಣಿ ಚಿತ್ರ